

# ಕಾನನದೊಳು ನೀರ ನಿನಾದ

■ ಗಣಪತಿ ಹೆಗಡೆ

ಉತ್ತರ ಕನ್ನಡ ಎಂದಾಕ್ಷಣ ಕಣ್ಣೆದುರಿಗೆ ಪಶ್ಚಿಮ ಘಟ್ಟಗಳ ಸಾಲು, ಅರಬ್ಬಿ ಸಮುದ್ರದ ಗುಂಟ ಮೈಚಾಚಿಕೊಂಡ ಸುಂದರ ಕಡಲತೀರಗಳ ಚಿತ್ರ ಹಾದುಹೋಗುತ್ತದ. ಆದರೆ, ಅದಕ್ಕಿಂತಲೂ ಜಿಲ್ಲೆಯ ಸೌಂದರ್ಯಕ್ಕೆ ಭೋರ್ಗರೆವ ಜಲಪಾತಗಳು ಮೆರುಗು ನೀಡುತ್ತವೆ. ಸಾಲು ಸಾಲು ಪರ್ವತಗಳನ್ನು ಹೊಂದಿರುವ ಇಲ್ಲಿ ಮಳೆಗಾಲದಲ್ಲಿ ಗುಡ್ಡಗಳಿಂದ ಇಳಿದು ಬರುವ ನೀರು ಸೃಷ್ಟಿಸುವ ಜಲಪಾತಗಳಿಗೆ ಲೆಕ್ಕವಿಲ್ಲ. ಕಣ್ಣು ಹಾಯಿಸಿದ ಕಡೆಯಲ್ಲೆಲ್ಲ ಹಸಿರ ರಾಶಿ, ಅವುಗಳ ಮಧ್ಯೆ ಹಾಲ್ನೊರೆಯಂತೆ ಧುಮ್ಮಿಕ್ಕುವ ಜಲಪಾತಗಳು ಸ್ವರ್ಗಸದೃಶ ವಾತಾವರಣ ರೂಪಿಸಿಬಿಡುತ್ತವೆ.

ಬೇಸಿಗೆಯಲ್ಲಿ ಪ್ರವಾಸಿಗರು ಕಡಲತೀರಗಳತ್ತ ದಾಂಗುಡಿ ಇಟ್ಟರೆ, ಮಳೆಗಾಲದಲ್ಲಿ ಜಲಪಾತಗಳ ಕಾರಣಕ್ಕಾಗಿ ಉತ್ತರ ಕನ್ನಡದತ್ತ ಧಾವಿಸುತ್ತಾರೆ. ಮಳೆ ಬೀಳಲಾರಂಭಿಸಿದ ತಕ್ಷಣವೇ ಸಾಹಸಿ ಪ್ರವೃತ್ತಿಯ ಪ್ರವಾಸಿಗರ ದೃಷ್ಟಿ ಇತ್ತ ನೆಟ್ಟು ಬಿಡುತ್ತದೆ. ಇಲ್ಲಿ ಜಗದ್ವಿಖ್ಯಾತ ಜೋಗ ಜಲಪಾತದಿಂದ ಹಿಡಿದು, ಅಪಾಯಕಾರಿ ದೂಧ್‌ಸಾಗರ ಜಲಪಾತದವರೆಗೆ, ಸಾಲು ಸಾಲಾಗಿ ಧುಮ್ಮಿಕ್ಕುವ ಸಾತೊಡ್ಡಿ ಜಲಪಾತದಿಂದ ಹಿಡಿದು ಅಡಿಯಷ್ಟು ಎತ್ತರದಿಂದ ಭೋರ್ಗರೆಯುತ್ತ ಜನರನ್ನು ಸೆಳೆಯುವ ಗೊಲ್ಲಾರಿ ಜಲಪಾತದವರೆಗೆ ಸಾಕಷ್ಟು ಜಲಪಾತಗಳಿವೆ.

ನಿಖರವಾಗಿ ಹೇಳಲು ಪ್ರವಾಸೋದ್ಯಮ ಇಲಾಖೆಗೂ ಸಾಧ್ಯವಾಗದಷ್ಟು ಜಲಧಾರೆಗಳು ಮಲೆನಾಡು, ಕರಾವಳಿ ಭಾಗದಲ್ಲಿವೆ. ಪ್ರವಾಸಿಗರ ವೀಕ್ಷಣೆಗೆ ಲಭಿಸಬಹುದಾದ ಸುಮಾರು 22 ಪ್ರಮುಖ ಜಲಪಾತಗಳನ್ನಷ್ಟೇ ಪ್ರವಾಸೋದ್ಯಮ ಇಲಾಖೆ ಈವರೆಗೆ ಪರಿಚಯಿಸುವ ಪ್ರಯತ್ನ ನಡೆಸಿದೆ. ಅವುಗಳ ಹೊರತಾಗಿ ದಟ್ಟ ಅರಣ್ಯದಲ್ಲಿ, ಎತ್ತರದ ಪರ್ವತದ ನಡುವೆ ಸೃಷ್ಟಿಯಾಗುವ ಜಲಪಾತಗಳು ಹೊರಜಗತ್ತಿಗೆ ಅಷ್ಟಾಗಿ ತಿಳಿದಿಲ್ಲ!

ಮಳೆಗಾಲದಲ್ಲಿ ಬಲಗೊಳ್ಳುವ ಜಲಧಾರೆಗಳು ನೋಡುಗರನ್ನು ಸೆಳೆಯುತ್ತವಾದರೂ ಅವುಗಳನ್ನು ಕಣ್ತುಂಬಿಕೊಳ್ಳಲು ಸದ್ಯಕ್ಕಂತೂ ಅವಕಾಶ ಸಿಗುವುದು ಕಡಿಮೆ! ದುರ್ಗಮವಾದ ಕಾಡಿನ ದಾರಿ, ತುಂಬಿ ಹರಿಯುವ ಹಳ್ಳಗಳನ್ನು ದಾಟಿ ಸಾಗಬೇಕಾಗಿರುವುದರಿಂದ ಮಳೆ ತೀವ್ರವಾಗಿದ್ದಾಗ ಈ ಮಾರ್ಗಗಳು ಅಪಾಯಕಾರಿಯೂ ಹೌದು. ಜೊತೆಗೆ ಈಚಿನ ವರ್ಷದಲ್ಲಿ ಭೂಕುಸಿತ ಸಮಸ್ಯೆ ಹೆಚ್ಚಿರುವ ಕಾರಣದಿಂದ ಮಳೆಗಾಲದಲ್ಲಿ ಜಲಪಾತಗಳ ವೀಕ್ಷಣೆಗೆ ನಿರ್ಬಂಧ ವಿಧಿಸಲಾಗುತ್ತಿದೆ. ನೀವು ಉತ್ತರ ಕನ್ನಡದ ಜಲಪಾತಗಳ ಸೊಬಗು ಕಣ್ತುಂಬಿಕೊಳ್ಳಬೇಕೆಂದರೆ ಆಗಸ್ಟ್ ಬಳಿಕ ಬರುವುದೇ ಹೆಚ್ಚು ಸೂಕ್ತ.

ಮಳೆಗಾಲದ ಬಳಿಕವೂ ಕೆಲ ತಿಂಗಳು ಜಲಪಾತಗಳು ಭೋರ್ಗರೆಯುತ್ತಲೇ ಇರುತ್ತವೆ. ಡಿಸೆಂಬರ್ ಅಂತ್ಯದವರೆಗೂ ಅವುಗಳ ವೀಕ್ಷಣೆ ಸಾಧ್ಯವಾಗುತ್ತದೆ. ಅಂತಹ ಪ್ರಮುಖ ಜಲಪಾತಗಳ ಪಟ್ಟಿ ಇಲ್ಲಿದೆ.

## ಉಂಚಳ್ಳಿ ಜಲಪಾತ

ಸಿದ್ದಾಪುರ ತಾಲ್ಲೂಕಿನ ಉಂಚಳ್ಳಿ ಗ್ರಾಮದಲ್ಲಿ ಅಘನಾಶಿನಿ ನದಿಯಿಂದ ಸೃಷ್ಟಿಯಾದ ಜಲಪಾತಕ್ಕೆ ಉಂಚಳ್ಳಿ ಜಲಪಾತ ಅಥವಾ ಕೆಪ್ಪ ಜೋಗ ಎಂತಲೂ ಕರೆಯಲಾಗುತ್ತದೆ. ವರ್ಷದುದ್ದಕ್ಕೂ ಇಲ್ಲಿ ನೀರು ಧುಮ್ಮಿಕ್ಕುತ್ತ ಪ್ರಾಕೃತಿಕ ಸೊಬಗು ಸೃಷ್ಟಿಸುತ್ತದೆ. 116 ಮೀಟರ್ ಎತ್ತರದಿಂದ ಧುಮ್ಮಿಕ್ಕುವ ಜಲಧಾರೆಯನ್ನು ಎದುರಿನಿಂದ ಕಣ್ತುಂಬಿಕೊಳ್ಳಲು ವೀಕ್ಷಣಾ ಗೋಪುರಗಳ ವ್ಯವಸ್ಥೆ ಇದೆ. ಬ್ರಿಟಿಷ್ ಅಧಿಕಾರಿಯಾಗಿದ್ದ ಲೂಶಿಂಗ್‌ಟನ್ ಹೊರಜಗತ್ತಿಗೆ ಜಲಪಾತ ಪರಿಚಯಿಸಿದ್ದ ಎಂಬ ಕಾರಣಕ್ಕೆ ‘ಲೂಶಿಂಗ್‌ಟನ್ ಜಲಪಾತ’ ಎಂದೂ ಕರೆಯಲಾಗುತ್ತದೆ. ಇಲ್ಲಿ ನೀರು ಭೋರ್ಗರೆಯುವ ಸದ್ದಿನ ಎದುರು ಬೇರೇನೂ ಕೇಳಿಸದ ಕಾರಣಕ್ಕೆ ಕೆಪ್ಪ ಜೋಗ ಎಂಬ ಅಡ್ಡ ಹೆಸರೂ ಇದೆ.

## ಕಾನೂರು ವಜ್ರ ಜಲಪಾತ

ಕಾರವಾರ ಮತ್ತು ಯಲ್ಲಾಪುರ ತಾಲ್ಲೂಕಿನ ಗಡಿಭಾಗ ದೇವಕಾರ ಬಳಿ ಈ ಜಲಪಾತವಿದೆ. 64 ಮೀಟರ್ ಎತ್ತರದಿಂದ ಧುಮ್ಮಿಕ್ಕುವ ಜಲಪಾತವನ್ನು ನೀರು ಬೀಳುವ ಪ್ರದೇಶದಿಂದ ವೀಕ್ಷಿಸಲು ಸಾಧ್ಯವಾಗುತ್ತದೆ. ಕಾಳಿ ನದಿಗೆ ಕದ್ರಾ ಬಳಿ ನಿರ್ಮಿಸಿದ ಅಣೆಕಟ್ಟೆಯ ಹಿನ್ನೀರಿನಿಂದ ಜಲಪಾತ ಉಂಟಾಗಿದೆ. ಇದಕ್ಕೆ ದೇವಕಾರ ಜಲಪಾತ ಎಂದೂ ಕರೆಯಲಾಗುತ್ತದೆ.

ಹುಬ್ಬಳ್ಳಿ–ಅಂಕೋಲಾ ರಾಷ್ಟ್ರೀಯ ಹೆದ್ದಾರಿಯಿಂದ ಸಾಗಿ ಬಂದರೆ ಕೈಗಾಕ್ಕೆ ಸಂಪರ್ಕಿಸುವ ಒಳರಸ್ತೆಯಲ್ಲಿ ಸಾಗಿದಾಗ ಜಲಪಾತ ಸಿಗುತ್ತದೆ. ಈ ಸ್ಥಳಕ್ಕೆ ತೆರಳಲು ಒಂದು ಕಿ.ಮೀನಷ್ಟು ಟ್ರೆಕ್ಕಿಂಗ್ ಮಾಡಬೇಕಾಗುತ್ತದೆ. ಸೆಪ್ಟೆಂಬರ್ ಬಳಿಕ ಈ ಜಲಪಾತ ನೋಡಲು ಸಾಗಬಹುದು.

